

ಬಂಡೀಪುರದ ಕಾಳ್ಗಿಚ್ಚಿಗೆ ಉರಿದು ಬೂದಿಯಾಗಿರುವ ಕಾಡು ಚಿತ್ರ: ಸಿ.ಆರ್. ವೆಂಕಟರಾಮು

ಸಂರಕ್ಷಿತ ಅರಣ್ಯದಲ್ಲಿ ಬೆಂಕಿ ಹಚ್ಚಲು ಹೆಚ್ಚಾಗಿ ಬಳಸುವುದು ಆನೆ ಲದ್ದಿಯನ್ನೇ. ಒಣಗಿದ ಲದ್ದಿಗೆ ಬೆಂಕಿಹಚ್ಚಿ ಅದನ್ನು ಪೊದೆಗಳಲ್ಲಿ ಇಡುತ್ತಾರೆ. ಅದರ ಸುತ್ತಲೂ ತರಗೆಲೆ ಸುರಿಯುತ್ತಾರೆ. ರಭಸವಾಗಿ ಬೀಸುವ ಗಾಳಿಗೆ ಸುಲಭವಾಗಿ ಬೆಂಕಿ ಹೊತ್ತಿಕೊಳ್ಳುತ್ತದೆ. ಸೊಳ್ಳೆಬತ್ತಿ ಹಚ್ಚಿ ಅದರ ಸುತ್ತಲೂ ಬೆಂಕಿಕಡ್ಡಿಗಳನ್ನು ಸುರಿದು ಬೆಂಕಿಹಚ್ಚುವ ದುಷ್ಕರ್ಮಿಗಳೂ ಇದ್ದಾರೆ.

ಕಾಡಿಗೆ ಬೆಂಕಿಹಚ್ಚಲು ಇಲಾಖೆಯ ಮೇಲಿನ ದ್ವೇಷವೊಂದೇ ಕಾರಣವಾಗುವುದಿಲ್ಲ. ಕಾಡಿನಲ್ಲಿ ಬೇಸಿಗೆ ವೇಳೆ ಹುಲ್ಲು ಒಣಗಿರುತ್ತದೆ. ಮಳೆಗಾಲದಲ್ಲಿ ಮೇವು ಚಿಗುರಲೆಂದು ದನಗಾಹಿಗಳು ಅದಕ್ಕೆ ಬೆಂಕಿ ಇಡುತ್ತಾರೆ.

ಸಂತಾನೋತ್ಪತ್ತಿ ವೇಳೆ ಜಿಂಕೆಗಳ ಕೊಂಬುಗಳು ಉದುರಿ ಮತ್ತೆ ಹುಟ್ಟುತ್ತವೆ. ಕಾಡಂಚಿನ ಕೆಲವರು ಕೊಂಬುಗಳನ್ನು ಸಂಗ್ರಹಿಸಿ ನಗರ ಪ್ರದೇಶದ ದಂಧೆಕೋರರಿಗೆ ಮಾರಾಟ ಮಾಡುತ್ತಾರೆ. ದಟ್ಟಪೊದೆಗಳು, ಹುಲ್ಲಿನ ಮಧ್ಯೆ ಬಿದ್ದಿರುವ ಇವುಗಳನ್ನು ಸಂಗ್ರಹಿಸುವುದು ಕಷ್ಟಕರ. ಕೊಂಬು ಸಂಗ್ರಹಿಸುವವರು ಕಾಡಿಗೆ ಬೆಂಕಿ ಹಚ್ಚುತ್ತಾರೆ. ಚಳಿಗಾಲ ಆರಂಭವಾದ ತಕ್ಷಣ ಕಾಡಿನಲ್ಲಿ ಉಣ್ಣೆಗಳ ಕಾಟ ಶುರುವಾಗುತ್ತದೆ. ಇವುಗಳನ್ನು ಎದುರಿಸುವುದು ಬುಡಕಟ್ಟು ಜನರಿಗೆ ಸವಾಲು. ಇವುಗಳ ನಿಗ್ರಹಕ್ಕಾಗಿ ಬೆಂಕಿ ಹಚ್ಚುತ್ತಾರೆ.

ಕಾಡಿನ ಎತ್ತರದ ಬೆಟ್ಟ ಪ್ರದೇಶಗಳಲ್ಲೂ ಕೆಲವೊಮ್ಮೆ ಬೆಂಕಿ ಕಾಣಿಸಿಕೊಳ್ಳುವುದು ಉಂಟು. ಇಂತಹ ದುರ್ಗಮ ಸ್ಥಳಕ್ಕೆ ತೆರಳಿ ಬೆಂಕಿ ಇಟ್ಟವರು ಯಾರೆಂಬುದು ಅಧಿಕಾರಿಗಳಿಗೂ ಬಗೆಹರಿಯದ ಪ್ರಶ್ನೆ. ಈ ಕೃತ್ಯದ ಹಿಂದೆ ಅಕ್ರಮವಾಗಿ ಗಾಂಜಾ ಬೆಳೆಯುವವರ ಕೈವಾಡ ಇರುತ್ತದೆ. ಕಾಡು ಭಸ್ಮವಾದ ಬಳಿಕ ಮಳೆಗಾಲದಲ್ಲಿ ದುಷ್ಕರ್ಮಿಗಳು ಆ ಸ್ಥಳಕ್ಕೆ ತೆರಳಿ ಗಾಂಜಾ ಗಿಡದ ಬೀಜಗಳನ್ನು ಬಿತ್ತನೆ ಮಾಡುತ್ತಾರೆ. ಅವು ಹುಲುಸಾಗಿ ಬೆಳೆಯುತ್ತವೆ. ನಿರ್ದಿಷ್ಟ ಸಮಯದಲ್ಲಿ ಅಲ್ಲಿಗೆ ತೆರಳಿ ಕತ್ತರಿಸಿಕೊಂಡು ಬರುತ್ತಾರೆ. ಮೂರು ವರ್ಷದ ಹಿಂದೆ ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಾಥ ಸ್ವಾಮಿ ಹುಲಿ ರಕ್ಷಿತಾರಣ್ಯದಲ್ಲಿ ಇಂತಹ ಎರಡು ಪ್ರಕರಣ ವರದಿಯಾಗಿದ್ದವು.

ಬಂಡೀಪುರದಲ್ಲಿನ ಈ ವರ್ಷದ ಕಾಳ್ಗಿಚ್ಚು, ಕಾಡುಗಳನ್ನು ನೈಸರ್ಗಿಕ ಹಾಗೂ ಮಾನವ ನಿರ್ಮಿತ ವಿಕೋಪಗಳಿಂದ ರಕ್ಷಿಸಿಕೊಳ್ಳಬೇಕಾದ ಮಾರ್ಗೋಪಾಯಗಳ ಕುರಿತು ಮರುಚಿಂತಿಸಲು ಅವಕಾಶ ಮಾಡಿಕೊಟ್ಟಿದೆ. ಇಡೀ ಭೂಮಂಡಲ ಕುದಿಯುವ ಪಾತ್ರೆಯಂತಾಗಿರುವ ದೃಷ್ಟಿಯಿಂದ ಕಾಡುಗಳನ್ನು ಉಳಿಸಿಕೊಳ್ಳಬೇಕಾದುದು ಅನಿವಾರ್ಯ ಅಗತ್ಯ. ಹಸಿರು ಮತ್ತು ಉಸಿರಿನಂತೆ, ಕಾಡು ಹಾಗೂ ನಾಡು ಒಂದೇ ನಾಣ್ಯದ ಎರಡು ಮುಖಗಳು. ಆಧುನಿಕತೆಯ ಹೆಸರಿನಲ್ಲಿ ನಾವು ಕಟ್ಟಿಕೊಂಡಿರುವ ವ್ಯವಸ್ಥೆ ನಾಳೆಗೂ ಮುಂದಿನ ಪೀಳಿಗೆಗೂ ಉಳಿಯಬೇಕೆಂದರೆ ಕಾಡುಗಳನ್ನು ರಕ್ಷಿಸಬೇಕಾದುದು ಅಗತ್ಯ. ಬೆಂಕಿಯಿಂದ ಮಾತ್ರವಲ್ಲ, ನಮ್ಮ ಮನಸ್ಸಿನಲ್ಲಿರುವ ಕಿಡಿಗಳಿಂದಲೂ ಅರಣ್ಯವನ್ನು ಉಳಿಸಿಕೊಳ್ಳಬೇಕಾಗಿದೆ. ■

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ.
ಇ–ಮೇಲ್: feedback@sudha.co.in

